

‘ಫ್ಯಾಮಿಲಿ ಪ್ಲಾನಿಂಗು... ಅದೂ ಇದು ಅಂತೆಲ್ಲ ಹೇಳಿ ಮುಂದಕ್ಕೆ ಹಾಕ್ತಾ ಹೋಗ್ಬೇಡಿ. ಆಮೇಲೆ ಮಕ್ಕಳಾಗೋದೇ ಕಷ್ಟ. ಗಂಡೋ ಹೆಣ್ಣೋ, ಮೊದಲು ಒಂದು ಮಗು ಅಂತ ಆಗ್ಲಿ. ಆಮೇಲೆ ಬೇಕಾದ್ರೆ ಸ್ವಲ್ಪ ತಡೆದು, ನಿಮಗೆ ಯಾವಾಗ ಸರಿ ಅನ್ನಸತ್ತೋ ಆಗ ಎರಡನೆಯದು ಮಾಡ್ಕೊಳ್ಳಿ.’

ಮದುವೆಯಾದ ಹೊಸತರಲ್ಲಿ ಬಹುತೇಕರಿಗೆ ಮನೆ ಹಿರಿಯರಿಂದ ಸಿಗುವ ಸಾಮಾನ್ಯ ಸಲಹೆಯಿದು. ಮೇಲ್ನೋಟಕ್ಕೆ ಸಹಜ ಕಾಳಜಿಯ ಮಾತಾಗಿ ಕಂಡರೂ ಇದು ತನ್ನೊಳಗೆ ಕುಟುಂಬ ವ್ಯವಸ್ಥೆಯ ಅಡಿಗಲ್ಲನ್ನೂ ಬದಲಾವಣೆಯ ಕುಲುಮೆಯಲ್ಲಿ ಕುಟುಂಬ ವ್ಯವಸ್ಥೆ ಹಾದುಹೋಗುತ್ತಿರುವ ಸೂಚನೆಯನ್ನೂ ಒಟ್ಟೊಟ್ಟಿಗೇ ಅಡಗಿಸಿ ಇಟ್ಟುಕೊಂಡಿರುವಂತಿದೆ.

‘ದೇವರು ಕೊಟ್ಟಾಗ ಬೇಡ ಅನ್ನಬಾರದು. ಆದಷ್ಟು ಆಗಲಿ’ ಎನ್ನುವ ಮನಸ್ಥಿತಿ ಇಂದಿಲ್ಲ. ಅಂದಿನ ಕುಟುಂಬ ವ್ಯವಸ್ಥೆಯ ಸ್ವರೂಪಕ್ಕೂ ಇಂದಿನ ಕುಟುಂಬವೆಂಬ ಪರಿಕಲ್ಪನೆಗೂ ಅಜ–ಗಜ ಎನ್ನುವ ಅಂತರವಿದೆ. ಹೆಣ್ಣು ತನ್ನ ಅಸ್ಮಿತೆಯ ಹುಡುಕಾಟದಲ್ಲಿ ತೊಡಗಿದ್ದು ಮತ್ತು ಅದರ ಭಾಗವಾಗಿಯೇ ಸಾಮಾಜಿಕವಾಗಿ, ಕೌಟುಂಬಿಕವಾಗಿ ತನ್ನ ಸ್ಥಾನಮಾನ, ಹಕ್ಕುಗಳ ಬಗ್ಗೆ ಪ್ರಶ್ನಿಸತೊಡಗಿರುವುದು ಈ ಬದಲಾವಣೆಗೆ ಬಹುಮುಖ್ಯವಾದ ಕಾರಣವಾಗಿದೆ. ಎಲ್.ಜಿ.ಬಿ.ಟಿ. ಸಮುದಾಯದವರಿಗೆ ಕಾನೂನು ಮಾನ್ಯತೆ ದೊರೆತಿದೆ; ಸಲಿಂಗ ಪ್ರೇಮಿಗಳು ಮದುವೆಯಾಗಿ ಕೌಟುಂಬಿಕ ಜೀವನ ಆರಂಭಿಸಿದ್ದಾರೆ; ಮದುವೆಯಾಗದೆ ಮಕ್ಕಳನ್ನು ದತ್ತು ಪಡೆದುಕೊಳ್ಳುವ ಸಿಂಗಲ್ ಪೇರೆಂಟ್ ಪರಿಕಲ್ಪನೆ ಜನಪ್ರಿಯಗೊಳ್ಳತೊಡಗಿದೆ – ಈ ಎಲ್ಲವೂ ‘ಹೊಸ ಕಾಲದ ಕುಟುಂಬ’ ವ್ಯವಸ್ಥೆಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುತ್ತಿವೆ. ಕುಟುಂಬ ವ್ಯವಸ್ಥೆಯ ಸಾಂಪ್ರದಾಯಿಕ ಪರಿಕಲ್ಪನೆ ಮುರಿದು ಕಟ್ಟಿಕೊಳ್ಳುತ್ತಿರುವ ಕಾಲವಿದು.

ಜನಪದರು ‘ಮಕ್ಕಳಿರಲವ್ವ ಮನೆತುಂಬ’ ಎಂದರು. ಸಮಾಜ ಸುಧಾರಕರಾದ ಅಂಬೇಡ್ಕರರು ‘ನಿಮಗೆ ಸಾಕಲು ಸಾಧ್ಯವಾದರೆ, ನಿಮಗಿಂತ ಉತ್ತಮ ಬದುಕನ್ನು ನಿಮ್ಮ ಮಕ್ಕಳಿಗೆ ಕೊಡಲು ಸಾಧ್ಯವಾಗುತ್ತದೆ ಎಂದಾದರೆ ಮಾತ್ರ ಮಕ್ಕಳನ್ನು ಹೆರಿ’ ಎಂದರು. ಆದರೆ ಎರಡಾಗಲಿ, ಸಮಸ್ಯೆಯಿದ್ದರೆ ಹೇಗಾದರೂ ಆಗಲಿ – ಗಂಡೋ ಹೆಣ್ಣೋ ಒಂದು ಮಗುವಾಗಲಿ ಅನ್ನುವ ಪರಿಸ್ಥಿತಿಗೆ ಪ್ರಸ್ತುತ ತಲುಪಿದ್ದೇವೆ.

## ಕುಟುಂಬ: ಬದಲಾದ ಪರಿಕಲ್ಪನೆ

ಕುಟುಂಬ ವ್ಯವಸ್ಥೆಯ ಪರಿಕಲ್ಪನೆಗೂ ಸಂತಾನಕ್ಕೂ ನೇರವಾದ ಸಂಬಂಧವಿದೆ. ಮದುವೆಯೆಂಬ ಕಲ್ಪನೆಯೇ ಸಂತಾನೋತ್ಪತ್ತಿ ನಡೆಸಲು ಸಿಗುವ ಒಂದು ಪ್ರಮಾಣಪತ್ರ ಎಂಬ ಕಲ್ಪನೆ ಈಗಲೂ ನಮ್ಮ ಸಮಾಜದಲ್ಲಿ